ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿಯವರು)

ಪ್ರಶ್ನೆ

1. ಬೆಂಗಳೂರು ನಗರದ ಹಳೆ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಪೈಪ್‌ಗಳನ್ನು ಬದಲಾಯಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಉತ್ತರ

1. ನಗರದ ಹಳೆಯ ಪ್ರದೇಶಗಳಲ್ಲಿ ತುಕ್ಕು ಹಿಡಿದಿರುವ ನೀರಿನ ಕೊಳವೆಗಳನ್ನು ಹಂತ ಹಂತವಾಗಿ ಬದಲಾಯಿಸುವ ಯೋಜನೆಯನ್ನು ಬೆಂಗಳೂರು ಜಲ ಮಂಡಲಿಯು ಕೈಗೆತ್ತಿಕೊಂಡಿದ್ದು ಇದಕ್ಕೆ ಸರ್ಕಾರವು ಪ್ರತಿ ವರ್ಷವು ಆರ್ಥಿಕ ನೆರವನ್ನು ನೀಡುತ್ತಿದೆ. 1998-99ರಿಂದ ಇಲ್ಲಿಯವರೆವಿಗೆ 21.90 ಕಿ.ಮೀ. ದೂರದ ತುಕ್ಕು ಹಿಡಿದ ಪೈಪುಗಳನ್ನು 174.85 ಲಕ್ಷ ರೂ.ವೆಚ್ಚದಲ್ಲಿ ಬದಲಾಯಿಸಲಾಗಿದೆ.

ಬೆಂಗಳೂರು ನಗರಕ್ಕೆ ಕಾವೇರಿ ನಾಲ್ಕನೇ ಹಂತದ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 84(171)

ಸದಸ್ಯರ ಹೆಸರು: ಶ್ರೀ ರಾಮಲಿಂಗ ರೆಡ್ಡಿ (ಜಯನಗರ):

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಯವರು)

ಪ್ರಶ್ನೆ

1. ಬೆಂಗಳೂರು ನಗರಕ್ಕೆ ಕಾವೇರಿ ನದಿ ಯೋಜನೆಗಳಿಂದ ಇಲ್ಲಿಯವರೆಗೆ ಪ್ರತಿ ದಿನ ಪೂರೈಕೆಯಾಗುತ್ತಿರುವ ನೀರಿನ ಪ್ರಮಾಣವೆಷ್ಟು?

2. ಕಾವೇರಿ 4ನೇ ಘಟ್ಟದ ಒಂದನೇ ಹಂತದ ಯೋಜನೆಯನ್ನು ಕಾರ್ಯಗತಗೊಳಿಸಲಾಗಿದೆಯೇ?

3. ಇದರ ಅಂದಾಜು ವೆಚ್ಚವೆಷ್ಟು?

4. ಇದರಿಂದ ನಗರಕ್ಕೆ ಹೆಚ್ಚಿಗೆ ಬರತಕ್ಕ ನೀರಿನ ಪ್ರಮಾಣವೆಷ್ಟು?

5. ಬೆಂಗಳೂರು ನಗರದಲ್ಲಿ 5.10 ವರ್ಷಗಳ ನಂತರದ ಜನಸಂಖ್ಯೆಯನ್ನು ಗಣನೆಗೆ

ತೆಗೆದುಕೊಂಡು ಕುಡಿಯುವ ನೀರಿನ ಪೂರೈಕೆಗಾಗಿ ಕೈಗೊಳ್ಳಲಿರುವ ಯೋಜನೆಗಳ ವಿವರ ನೀಡುವುದು.

ಉತ್ತರ

1. ಕಾವೇರಿ 1, 2 ಮತ್ತು 3ನೇ ಹಂತದ ಯೋಜನೆಗಳಿಂದ ನಗರಕ್ಕೆ ಪ್ರತಿದಿನವೂ ಸುಮಾರು 540 ದಶಲಕ್ಷ ಲೀಟರ್‌ನಷ್ಟು ನೀರನ್ನು ಸರಬರಾಜು ಮಾಡಲಾಗುತ್ತಿದೆ.

2. ಈ ಯೋಜನೆಯ ವಿವಿಧ ಕೆಲಸಗಳು ಪ್ರಗತಿಯಲ್ಲಿದೆ.

3. ಈ ಯೋಜನೆಯ ಅಂದಾಜು ವೆಚ್ಚ ರೂ.1072.00 ಕೋಟಿ ರೂ.ಗಳು.

4. 270 ದಶಲಕ್ಷ ಲೀಟರ್‌ನ್ನು ಪ್ರತಿ ದಿನವೂ ಅಧಿಕವಾಗಿ ಬೆಂಗಳೂರಿಗೆ ಪೂರೈಸಲಾಗುವುದು.

5. ಬೆಂಗಳೂರು ನಗರದ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ನೀರಿನ ಬೇಡಿಕೆಯನ್ನು ಗಮನಿಸಿ, 2006ನೇ ಇಸವಿ ವೇಳೆಗೆ ಕಾವೇರಿ 4ನೇ ಘಟ್ಟ 2ನೇ ಹಂತದ ಕೆಲಸಗಳನ್ನು ಪ್ರಾರಂಭಿಸಿ ಇಸವಿ 2011ರ ವರೆಗೆ ಸುಮಾರು 500 ದಶಲಕ್ಷ ಲೀಟರ್ ನೀರನ್ನು ಪ್ರತಿ ನಿತ್ಯವೂ ಪೂರೈಸಲು ಉದ್ದೇಶಿಸಲಾಗಿದೆ. ಈ ಯೋಜನೆಯ ವೆಚ್ಚ ಸುಮಾರು 3670 ಕೋಟಿ ರೂ.ಗಳು.

ಬೆಂಗಳೂರು ನಗರದಲ್ಲಿ ಕೇಂದ್ರದ ನೆರವಿನಿಂದ ಮೆಟ್ರೋ ರೈಲು ಸಂಚಾರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 85(173)

ಸದಸ್ಯರ ಹೆಸರು: ಶ್ರೀ ರಾಮಲಿಂಗಾರೆಡ್ಡಿ(ಜಯನಗರ)

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು)

ಪ್ರಶ್ನೆ

1) ಕೇಂದ್ರ ಸರ್ಕಾರವು ಮೆಟ್ರೊ ರೈಲು ಸಂಚಾರ ಯೋಜನೆಗೆ ಆರ್ಥಿಕ ನೆರವು ನೀಡಲು ಮುಂದೆ ಬಂದಿದೆಯೆ?

2) ಈ ಯೋಜನೆಯನ್ನು ಕಾರ್ಯಗತಗೊಳಿಸಲು ರಾಜ್ಯ ಸರ್ಕಾರ ಕೈಗೊಂಡ